# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 370 |
| 2 | ಸದಸ್ಯರ ಹೆಸರು | : | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 10.12.2020 |
| 4 | ಉತ್ತರಿಸುವ ಸಚಿವರು | : | ಸನ್ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪ್ರಸಕ್ತವಾಗಿ ಘೋಷಿಸಲಾದ ಅನುದಾನ ಎಷ್ಟು; ಕಳೆದ ವರ್ಷಕ್ಕೆ ಹೋಲಿಸಿದರೆ ಎಷ್ಟು ಮೊತ್ತಕಡಿಮೆಯಾಗಿದೆ; ಇಲ್ಲಿಯವರೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ; (ವಿವರ ನೀಡುವುದು) | ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ 2020-21ನೇ ಸಾಲಿನಲ್ಲಿ ರೂ.1131.86 ಕೋಟಿಗಳ ಅನುದಾನ ಹಂಚಿಕೆಯಾಗಿರುತ್ತದೆ. ಕಳೆದ ವರ್ಷದಲ್ಲಿ 2019-20ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ ರೂ.1500.00 ಕೋಟಿಗಳು ಕಳೆದ ವರ್ಷಕ್ಕೆ ಹೋಲಿಸಿದರೆ ವ್ಯತ್ಯಾಸದ ಮೊತ್ತ ರೂ.368.14 ಕೋಟಿಗಳಷ್ಟು ಕಡಿಮೆ ಹಂಚಿಕೆಯಾಗಿರುತ್ತದೆ.<br>ಈವರೆವಿಗೆ ಮಂಡಳಿಗೆ 2 ಕಂತುಗಳ ಅನುದಾನ ರೂ.544.04ಕೋಟಿಗಳು ಬಿಡುಗಡೆಯಾಗಿರುತ್ತದೆ. |
| (ಆ) | ಬಿಡುಗಡೆಯಾದ ಅನುದಾನದಲ್ಲಿ ರೂಪಿಸಲಾದ ಕ್ರಿಯಾಯೋಜನೆ ಏನು; ಪೂರ್ಣಪ್ರಮಾಣದಲ್ಲಿ ಮಂಡಳಿ ರಚನೆಯಾಗುವುದು ಯಾವಾಗ; (ವಿವರ ನೀಡುವುದು) | 2020-21ನೇ ಸಾಲಿನಲ್ಲಿ ಮಂಡಳಿಗೆ ರೂ.1131.86ಕೋಟಿ ನಿಗದಿಯಾಗಿದ್ದು, ಹಿಂದಿನ ಸಾಲುಗಳಲ್ಲಿ ಹೆಚ್ಚುವರಿಯಾಗಿ ಕ್ರಿಯಾಯೋಜನೆಯಲ್ಲಿ ಸೇರ್ಪಡೆಗೊಂಡು ಅನುಮೋದನೆಯಾಗಿ ಪ್ರಾರಂಭವಾಗದೇ ಇದ್ದ ಕಾಮಗಾರಿಗಳನ್ನು ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸಲು ಅನುಮತಿ ನೀಡಲಾಗಿದೆ.<br>ಮಂಡಳಿ ರಚನೆಯ ಬಗ್ಗೆ ಶೀಘ್ರದಲ್ಲಿ ಅಗತ್ಯ ಕ್ರಮವಹಿಸಲಾಗುವುದು. |
| (ಇ) | ಮಂಡಳಿಯಡಿ ಪ್ರತ್ಯೇಕ ಇಂಜಿಯರಿಂಗ್ ವಿಭಾಗ ರಚನೆಯ ಪ್ರಸ್ತಾಪ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು) | ಇಲ್ಲ |

ಸಂಖ್ಯೆ: ಪಿಡಿಎಸ್ 73 ಹೆಚ್‌ಕೆಡಿ 2020

**(ಬಿ.ಎಸ್.ಯಡಿಯೂರಪ್ಪ),**
ಮುಖ್ಯಮಂತ್ರಿ